(ಇಂದು ದಿನಾಂಕ 16-02-2022 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆ - 7 ಮತ್ತು 8 ನೇ ಪ್ರತಿವಾದಿ ಪರ ಶ್ರೀ ಎಸ್.ಆರ್.ಎಸ್. ವಕೀಲರಿಂದ-**

ನಾನು ದಾವೆಗೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿದರೆ ಗುರುತಿಸುತ್ತೇನೆ.

ದಾವಾ ಅನುಸೂಚಿ 3 ನೇ ಐಟಂ ಸ್ವತ್ತಿಗೆ ಸಂಬಂಧಪಟ್ಟಂತೆ ಪಹಣಿಪತ್ರಿಕೆಯನ್ನು ನಿ.ಡಿ. 4 ಎಂದು, ದಾವಾ ಅನುಸೂಚಿ 3 ನೇ ಐಟಂ ಸ್ವತ್ತಿಗೆ ಸಂಬಂಧಪಟ್ಟಂತೆ ಎಂ.ಆರ್. ನ ದೃಢೀಕೃತ ಪ್ರತಿಯನ್ನು ನಿ.ಡಿ. 5 ಎಂದು, 5 ಕಂದಾಯ ಪಾವತಿ ರಶೀದಿಯ ಕಾರ್ಬನ್ ಪ್ರತಿಯನ್ನು ನಿ.ಡಿ. 6 ರಿಂದ 10 ಎಂದು, ಪಂಚಾಯತಿಯವರು ನೀಡಿರುವ ದೃಢೀಕರಣ ಪತ್ರವನ್ನು ನಿ.ಡಿ. 11 ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿ.ಡಿ.2 ನ್ನು ತೋರಿಸಲಾಗಿ ಅದರಲ್ಲಿ ಕಂಡುಬರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯಲ್ಲಿನ ಸಾಕ್ಷಿದಾರರ ಸಹಿಯನ್ನು ನಿ.ಡಿ.2(ಬಿ) ಎಂದು ಗುರುತಿಸಲಾಯಿತು.

ನನ್ನ ಸಾಕ್ಷಿ ವಿಚಾರಣೆ ಹಾಗೂ ದಾಖಲಾತಿಗಳ ಆಧಾರದ ಮೇಲೆ ಪ್ರತಿವಾದ ಪತ್ರದಲ್ಲಿ ಕೋರಿರುವಂತೆ ದಾವೆಯನ್ನು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**(ಈ ಹಂತದಲ್ಲಿ 1 ರಿಂದ 6 ನೇ ಪ್ರತಿವಾದಿಗಳ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ